ಮೇಳೈಸಿ ವಿವರಿಸುತ್ತಿದ್ದಳು. ನೆನಪುಗಳನ್ನು ಬಿಚ್ಚುವುದು ಸಾಕಾಯಿತೆನ್ನಿಸಿದಾಗ, ವರ್ತಮಾನದ ಬಗ್ಗೆ, ಮದುವೆಗೆ ಮುನ್ನ ದೊಡ್ಡ ಸಮಸ್ಯೆಗಳೆಂದು ಕೇಳಲ್ಪಟ್ಟದ್ದ, ಆದರೆ ಅಷ್ಟೇನು ಕಷ್ಟವಲ್ಲದ ಸಂಸಾರ ತಾಪತ್ರಯಗಳ ಬಗ್ಗೆ, ಕುಟುಂಬ ಸಂಕ್ಷೇಮದ ಬಗ್ಗೆ ಮಾತಾಡಿದ್ದಳು. ಅವಳು ಹೇಳಲಿಲ್ಲವಾದರೂ, ಆಕೆಯ ಮದುವೆಯಾದಾಗ ಅವಳಿಗೆ 27 ವರ್ಷಗಳಾಗಿದ್ದುವೆಂದು ನನಗೆ ಗೊತ್ತಿತ್ತು.

ಮೊದಲಿನಂತೆ ಅಲುಗಾಡದೇ, ಕೂತ ಜಾಗದಲ್ಲಿ ಸ್ಥಿರವಾಗಿದ್ದಳು. ಕಣ್ಣುಗಳು ಕಿರಿದಾಗಿ ಕಂಡವು. ಗೋಡೆಗಳ ಮೇಲೆ ಆಕೆ ಒಂದು ಆಲಸ್ಯದ ನೋಟವನ್ನು ಬೀರಿದಳು.

'ಗೋಡೆಯ ಮೇಲಿನ ವಾಲ್ ಪೇಪರುಗಳನ್ನು ಬದಲಾಯಿಸಬೇಕು' ತನ್ನಲ್ಲೇ ಮಾತಾಡುತ್ತಿರುವ ಹಾಗೆ ಹೇಳಿದಳು.

ಆಕೆಯ ಚುಂಬಕ ಅಸ್ತಿತ್ವದ ಮುಂದೆ ನನ್ನ ಇಂದ್ರಿಯಗಳು ನಿಷ್ಕ್ರಿಯವಾದಂತೆ, ನಾಲಗೆಯು ಬಂಧನಕ್ಕೊಳಗಾಗಿದ್ದಾಗ, ಏನಾದರೊಂದು ಹೇಳಲೇ ಬೇಕಿದ್ದರಿಂದ ಆ ಮಾತನ್ನು ಒಪ್ಪಿದೆ. ಈ ಮಾತುಕತೆ ತಕ್ಷಣಕ್ಕೆ ಮುಗಿಯಬೇಕೆಂದೂ, ನಿರಂತರವಾಗಿ ಮುಂದುವರೆಯಬೇಕೆಂದೂ ಏಕಕಾಲಕ್ಕೆ ಅನ್ನಿಸಿತು. ಆಕೆಯ ಮೇಲಿನ ಗೌರವದಿಂದ ನೆಟ್ಟಿದ್ದ ನನ್ನ ದೃಷ್ಟಿಯನ್ನು ಬೇರೆಡೆಗೆ ಹರಿಸಲು ಪ್ರಯತ್ನಿಸಿದರೂ, ಬೇಸರ ಮತ್ತು ದಣಿವಿನಿಂದ ನೋಟವನ್ನು ತಿರುಗಿಸುತ್ತಿದ್ದೇನೆಂದು ಆಕೆ ಅಂದುಕೊಳ್ಳಬಾರದೆನ್ನುವ ಯೋಚನೆಯೂ ಬಂತು; ಯಾಕೆಂದರೆ ನಿಜಕ್ಕೂ ನನಗೆ ಆಕೆಯನ್ನು ನೋಡುವುದರಲ್ಲಿ ಯಾವ ದಣಿವೂ ಇರಲಿಲ್ಲವಾಗಿ ಆಕೆಯತ್ತ ಮತ್ತೊಮ್ಮೆ ಎವೆಯಿಕ್ಕಿದೆ. ನಮ್ಮ ಮಾತುಕತೆ ಅವಸಾನದತ್ತ ಸಾಗಿತ್ತು. ರಸ್ತೆಯಲ್ಲಿ ಸದ್ದಿಲ್ಲದ ಶಾಂತಿಯಿತ್ತು.

ಸ್ವಲ್ಪ ಹೊತ್ತು ನಾವು ಮಾತನಾಡುವುದನ್ನು ನಿಲ್ಲಿಸಿ (ಎಷ್ಟು ಹೊತ್ತೆಂದು ನನಗೆ ಗೊತ್ತಿಲ್ಲ) ಮೌನದಲ್ಲಿ ಕೂತಿದ್ದೆವು. ಸ್ಟಡಿಯಲ್ಲಿ ಇಲಿಯೊಂದು ಏನನ್ನೋ ಕಡಿಯುತ್ತಿರುವ ಶಬ್ದ ಮಾತ್ರ ಕೇಳಿಸುತ್ತಿತ್ತು; ಆ ಸದ್ದು ನನ್ನ ಮಂಪರಿನಿಂದ ನನ್ನನ್ನು ಹೊರಗೆಳೆದಿತ್ತು. ಆ ಬಗ್ಗೆ ನನಗೆ ಮಾತಾಡಬೇಕೆನ್ನಿಸಿದರೂ, ಹೇಗೆ ಪ್ರಾರಂಭಿಸಬೇಕೆಂದು ತಿಳಿಯಲಿಲ್ಲ. ಕೊನ್ಸಸಾಂವ್ ಅಮೂರ್ತದತ್ತ ಸಾಗುತ್ತಿದ್ದಂತಿತ್ತು. ಇದ್ದಕ್ಕಿದ್ದ ಹಾಗೆ ಕಿಟಕಿಯನ್ನು ತಟ್ಟಿದ ಶಬ್ದ ಮತ್ತು ಜೋರಾಗಿ ಕೂಗುತ್ತಿದ್ದ ದನಿ ಕೇಳಿಸಿತು:

'ಮಧ್ಯರಾತ್ರೆ ಪ್ರಾರ್ಥನೆ! ಮಧ್ಯರಾತ್ರೆ ಪ್ರಾರ್ಥನೆ!'

'ನೋಡಲ್ಲಿ ನಿನ್ನ ಗೆಳೆಯ ಬಂದ. ನೀನು ಅವನನ್ನು ಎಬ್ಬಿಸಬೇಕಿತ್ತು, ಆದರೆ ತಮಾಷೆಯೆಂದರೆ ಅವನೇ ನಿನ್ನನ್ನು ಎಬ್ಬಿಸಲು ಬಂದಿದ್ದಾನೆ. ಏಳು... ನಿನಗೆ ತಡವಾಗುತ್ತಿರಬಹುದು. ಹೊರಡು'

'ಆಗಲೇ ಸಮಯವಾಯಿತಾ?'

'ಅನುಮಾನವೇ ಇಲ್ಲ'

'ಮಧ್ಯರಾತ್ರಿ ಪ್ರಾರ್ಥನೆ!' ಹೊರಗಿನಿಂದ ಕಿಟಕಿ ಕುಟ್ಟುವ ಶಬ್ದದೊಂದಿಗೆ ದನಿಯೂ ಕೇಳಿಸಿತು.

'ಹೊರಡು, ಹೊರಡು, ಅವನನ್ನು ಕಾಯಿಸಬೇಡ. ಇದು ನನ್ನದೇ ತಪ್ಪು. ನಾಳೆಯವರೆಗೂ ವಿದಾಯ...'

ತನ್ನ ಅಡ್ಡಗಾಲಿನ ನಡಿಗೆಯೊಂದಿಗೆ ಕೊನ್ಸಸಾಂವ್ ಆ ಕೋಣೆಯಿಂದ ನಿಧಾನವಾಗಿ ಹೊರಬಿದ್ದಳು. ನಾನು ಗೆಳೆಯನೊಂದಿಗೆ ರಸ್ತೆ ಸೇರಿದೆ, ಇಬ್ಬರೂ ಈಗರ್ಜಿಯತ್ತ ಹೆಜ್ಜೆ ಹಾಕಿದೆವು. ಪ್ರಾರ್ಥನೆಯ ಸಮಯದಲ್ಲಿ ನನ್ನ ಮತ್ತು ಪಾದ್ರಿಯ ನಡುವೆ ಕೊನ್ಸಸಾಂವ್ ಪ್ರತ್ಯಕ್ಷಳಾಗುತ್ತಿದ್ದಳು. ಆ ಯೋಚನೆಯನ್ನು ಹದಿನೇಳು ವರ್ಷದ ಯುವಕನಾಗಿದ್ದವನ ಆಲೋಚನೆಗಳ ಖಾತೆಗೆ ಹಾಕೋಣ. ಮಾರನೆಯ ದಿನ ಮುಂಜಾನೆ, ತಿಂಡಿ ತಿನ್ನುವ ಸಮಯಕ್ಕೆ ನಾನು ರಾತ್ರೆಯ ಪ್ರಾರ್ಥನೆ, ಈಗರ್ಜಿಯಲ್ಲಿ ಸಿಕ್ಕ ಜನ ಎಲ್ಲದರ ಬಗ್ಗೆ ಮಾತಾಡಿದರೂ ಕೊನ್ಸಸಾಂವ್‌ಳ ಆಸಕ್ತಿಯನ್ನು ಕೆರಳಿಸಲು ಆಗಲೇ ಇಲ್ಲ. ಅಂದು ದಿನವಿಡೀ ಅವಳು ಸಹಜವಾಗಿ, ಎಂದಿನಂತೆ ಶಾಂತವಾಗಿ, ಕರುಣಾಳುವಾಗಿ, ಹಿಂದಿನ ದಿನದ ಮಾತುಕತೆ ನಡೆದೇ ಇಲ್ಲವೆಂಬಂತೆ ಇದ್ದುಬಿಟ್ಟಳು.

ಕೆಲದಿನಗಳಾದ ಮೇಲೆ ನಾನು ಮಂಗರಚೀಬಾಗೆ ಹೋದೆ. ಮಾರ್ಚ್ ತಿಂಗಳಲ್ಲಿ ನಾನು ರಿಯೋಗೆ ವಾಪಸ್ಸಾದಾಗ ನೋಟರಿ ಮಿದುಳಿನ ಲಕ್ವತಾಕಿ ತೀರಿಕೊಂಡಿದ್ದನೆಂದು ಗೊತ್ತಾಯಿತು. ಕೊನ್ಸಸಾಂವ್ ಈಗ ಎನ್ಜೆನ್ಹೊ ನೊವೊ ಜಿಲ್ಲೆಯಲ್ಲಿ ವಾಸ್ತವ್ಯವಿದ್ದಾಳೆಂದೂ ತಿಳಿಯಿತಾದರೂ ನಾನು ಆಕೆಯನ್ನು ನೋಡಲು ಹೋಗಲಿಲ್ಲ, ಭೇಟಿಯಾಗುವ ಪ್ರಯತ್ನವನ್ನು ಮಾಡಲಿಲ್ಲ. ಆಮೇಲೆ ಅವಳು ತನ್ನ ಗಂಡನಲ್ಲಿ ಗುಮಾಸ್ತನಾಗಿ ತರಬೇತಿಗೆ ಬಂದಿದ್ದವನನ್ನು ಲಗ್ನ ಮಾಡಿಕೊಂಡಳೆಂದು ಗೊತ್ತಾಯಿತು. ●